**ಸಿ.ಸಿ. ನಂಬ್ರ: 417/2024** **PW-2**

ದಿನಾಂಕ:.01.08.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಹೆಚ್ ಆರ್ ಎಸ್ ರವರಿಂದ:</u>**

ನಾನು ಅಟೋ ಚಾಲಕ. ನಾನು ಅಪಘಾತವಾದ ನಂತರ ನೋಡಿರುತ್ತೇನೆ. ಕಾರು ಕೋಟೇಶ್ವರ ಕಡೆಯಿಂದ ಉಡುಪಿ ಕಡೆಗೆ ಬಂದಿರುತ್ತದೆ. ಕಾರು ಸಾಮಾನ್ಯ ವೇಗದಲ್ಲಿ ಇತ್ತು. ರಸ್ತೆಯ ಭಾಗದಲ್ಲಿ ಕಾರು ಚಲಾಯಿಸುತ್ತಿತ್ತು. ಅಪಘಾತದ ಶಬ್ದ ಕೇಳಿ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಅಪಘಾತ ಹೇಗೆ ಸಂಭವಿಸಿತ್ತು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಸ್ಕೂಟಿ ದೇವಸ್ಥಾನದ ರಸ್ತೆಯಿಂದ ಹೆದ್ದಾರಿಗೆ ಬಂದದ್ದನ್ನು ನಾನು ಗಮನಿಸಿಲ್ಲ. ಸದ್ರಿ ದಿನ ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ನನಗೆ ಹೇಳಲಾಗುವುದಿಲ್ಲ. ಪೊಲೀಸರಿಗೆ ಹೇಳಿಕೆ ನೀಡಿರುವ ಬಗ್ಗೆ ನನಗೆ ತಿಳಿದಿಲ್ಲ. ಸಾಕ್ಷಿ ವಿಚಾರಣೆಗಾಗಿ ಸಮನ್ಸ ಬಂದ ನಂತರ ನನಗೆ ತಿಳಿದು ಬಂದಿರುತ್ತದೆ.

ವೈಯಕ್ತಿಕವಾಗಿ ನನಗೆ ಅಪಘಾತದಿಂದ ಪಾಂಡುರಂಗರವರು ಮೃತಪಟ್ಟಿರುವ ಬಗ್ಗೆ ತಿಳಿದು ಬಂದಿರುವುದಿಲ್ಲ. ಬೇರೆಯವರು ಹೇಳಿದ ಮೇರೆಗೆ ತಿಳಿದಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ಕಂಡಿರುವುದಿಲ್ಲ ಎಂದರೆ ಸರಿ. ಮೃತ ಪಾಂಡುರಂಗರವರು ಕಾರಿಗೆ ಬಂದು ಡಿಕ್ಕಿ ಪಡಿಸಿದ್ದು ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ: ಮಾನ್ಯ ಸ.ಸ.ಅರವರಿಂದ:</u>**

ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಮುಖ್ಯ ವಿಚಾರಣೆಯಲ್ಲಿ ನುಡಿದ ಸಾಕ್ಷಿ ವಿಚಾರಣೆಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ